ಕಥೆ




ಸ್ಪಾನಿಷ್ ಮೂಲ: **ಹೆರ್ನಾಂಡೊ ಟೆಲೆಜ್**

ಕನ್ನಡಕ್ಕೆ: **ಆನಂದತೀರ್ಥ ಪ್ಯಾಟಿ**

ಕಲೆ: ರೂಪಶ್ರೀ ಕಲ್ಲಿಗನೂರು




# ಇಲ್ಲ, ಇಲ್ಲ, ನಾನೊಬ್ಬ ಕ್ಷೌರಿಕ, ಅಷ್ಟೇ!

ಆತ ಏನೂ ಮಾತಾಡದೇ ಒಳಗೆ ಬಂದ. ಆ ಸಮಯದಲ್ಲಿ ನಾನು ಕ್ಷೌರದ ಕತ್ತಿಯನ್ನು ಮಸೆಯುವ ಕಲ್ಲಿನ ಮೇಲೆ ತಿಕ್ಕುತ್ತಿದ್ದೆ. ಹೆಜ್ಜೆಯ ಸದ್ದು ಕೇಳಿ, ಆತನತ್ತ ಹೊರಳಿ ನೋಡಿ ಅರೆಕ್ಷಣ ಬೆಚ್ಚಿಬಿದ್ದೆ. ನನ್ನ ಮುಖದ ಮೇಲೆ ಮೂಡಿದ ಭಯವನ್ನು ಆತ ಗಮನಿಸಲಿಲ್ಲ ಅನಿಸಿತು. ಅದನ್ನು ಅರಿತ ನಾನು, ಸಹಜತೆ ನಟಿಸುತ್ತ ಮತ್ತೆ ಕತ್ತಿ ಮಸೆಯುವುದನ್ನು ಮುಂದುವರಿಸಿದೆ. ಬಳಿಕ ಹೆಬ್ಬೆಟ್ಟಿನ ಮೇಲೆ ಅದನ್ನು ಒತ್ತಿ ಹರಿತವಾಗಿದೆಯಾ ಎಂದು ಪರೀಕ್ಷಿಸಿ ಬೆಳಕಿನೆಡೆಗೆ ಹಿಡಿದು ಖಚಿತಪಡಿಸಿಕೊಂಡೆ. ಆ ಹೊತ್ತಿನಲ್ಲಿ, ಗುಂಡುಗಳ ಸರಮಾಲೆ ಮತ್ತು ಪಿಸ್ತೂಲು ಜೋಡಿಸಿದ್ದ ಬೆಲ್ಟ್‌ನ್ನು ಆತ ಬಿಚ್ಚಿದ. ಪಕ್ಕದ ಗೋಡೆಯಲ್ಲಿನ ಮೊಳೆಗೆ ನೇತು ಹಾಕಿ, ಅದರ ಮೇಲೆ ಟೊಪ್ಪಿಯನ್ನು ಇಟ್ಟ. ಬಳಿಕ ತನ್ನ ಕೊರಳಿಗೆ ಎರಡೂ ಕೈ ಹಾಕಿ, ಟೈ ಸಡಿಲಿಸಿಕೊಂಡು 'ಆಹ್… ಎಷ್ಟು ಸೆಖೆಯಿದೆ! ಕ್ಷೌರ ಮಾಡು' ಎಂದ.

ಕುರ್ಚಿಯ ಮೇಲೆ ಕುಳಿತ ಆತನತ್ತ ಹೊರಳಿ ಸೂಕ್ಷ್ಮವಾಗಿ ಗಮನಿಸಿದೆ. ನಾಲ್ಕು ದಿನಗಳ ಹಿಂದೆ ಆತ ಕ್ಷೌರ ಮಾಡಿಸಿದ್ದನೆಂದು ಕಾಣಿಸಿತು. ನಮ್ಮ ಬಂಡುಕೋರರ ಗುಂಪುಗಳನ್ನು ಹುಡುಕಿಕೊಂಡು ನಾಲ್ಕು ದಿನ ಆತ ಓಡಾಡಿದ್ದ. ಬಿಸಿಲಿನ ತಾಪದಿಂದಾಗಿ ಆತನ ಮುಖ ತೀರಾ ಕೆಂಪಾಗಿತ್ತು.

ಸಾಬೂನಿನ ನಾಲ್ಕೈದು ಚೂರುಗಳನ್ನು ನಿಧಾನವಾಗಿ ಕತ್ತರಿಸಿದೆ. ಅವುಗಳನ್ನು ಬಟ್ಟಲಿನಲ್ಲಿ ಹಾಕಿ, ತುಸು ಬೆಚ್ಚಗಿನ ನೀರಿನಿಂದ ಕಲಕಿದೆ. ಒಂದೆರಡು ಕ್ಷಣಗಳಲ್ಲಿ ನೊರೆ ಬರಲು ಶುರುವಾಯಿತು. 'ಆ ಗುಂಪಿನ ಇತರ ಹುಡುಗರಿಗೂ ಇಷ್ಟೇ ಗಡ್ಡ ಇರಬಹುದು' ಎಂದು ತನ್ನ ಗಡ್ಡವನ್ನು ಎಡಗೈಯಿಂದ ನೇವರಿಸಿಕೊಳ್ಳುತ್ತ ಆತ ಮೆಲುದನಿಯಲ್ಲಿ ಹೇಳಿದ್ದನ್ನು ಕೇಳಿ ನೊರೆ ಮಾಡುವ ಕೆಲಸ ಮುಂದುವರಿಸಿದೆ.

'ನಾವು ಅವರಿಗೆ ಸರಿಯಾದ ಪಾಠ ಕಲಿಸಿದೆವು ಅಲ್ಲವೇ? ಅದರಲ್ಲೂ ಪಟ್ಟುಬಿಡದೇ ಸೆಣಸಾಡಿ ಗುಂಪಿನ ಪ್ರಮುಖ ನಾಯಕರನ್ನು ಸೆರೆಹಿಡಿದೆವು. ಕೆಲವರು ಶವವಾಗಿ ಸಿಕ್ಕರು. ಇನ್ನಷ್ಟು ಜನ ಪರಾರಿಯಾದರು; ಆದರೆ ಬಿಡುವುದಿಲ್ಲ… ಸ್ವಲ್ಪ ಸಮಯದಲ್ಲೇ ಅವರನ್ನೂ ಮುಗಿಸುತ್ತೇವೆ.'

ನಾನು ಕೇಳಿದೆ, 'ಎಷ್ಟು ಜನರನ್ನು ಸೆರೆಹಿಡಿದಿರಿ?'

"ಒಟ್ಟು ಹದಿನಾಲ್ಕು. ಅವರನ್ನು ಸೆರೆ ಹಾಕಲು ದಟ್ಟ ಕಾಡಿನ ಒಳಗೆ ನುಗ್ಗಬೇಕಾಯಿತು. ಉಳಿದವರನ್ನೂ ಇಷ್ಟರಲ್ಲೇ ಸೆರೆಹಿಡಿಯುತ್ತೇವೆ. ಅವರ ಪೈಕಿ ಯಾರೊಬ್ಬರೂ ಜೀವಂತವಾಗಿ ಉಳಿಯಲಾರರು… ಯಾರೊಬ್ಬರೂ…" - ಮತ್ತೆ ಮತ್ತೆ ಆತ ಹಲ್ಲು ಕಡಿಯುತ್ತ ಕ್ರೋಧದಿಂದ ನುಡಿದ.

ನೊರೆ ತುಂಬಿದ ಬಟ್ಟಲನ್ನು ಎಡಕೈಯಲ್ಲೂ, ಶುದ್ಧವಾಗಿ ತೊಳೆದ ಬ್ರಶ್ಶನ್ನು ಬಲಗೈಯಲ್ಲೂ ಹಿಡಿದ